ಶ್ರೀ ಪಿ. ಎಂ. ನಾಡಗೌಡ.—ಮಾಡಿದೆ :

Fixed assets :	1,25,82,499.86
ಅದರ್ ಅಸೆಟ್ಸ್	17,566.58
Investment :	2,19,500
Closing stock	30,26,317
ಅಡ್ವಾನ್ಸೆಸ್	
Deposits—sundry debtors	10,15,000
Cash and bank balances	1,62,487
Loss :	49,10,000
Total	2,19,069

ಶ್ರೀ ಜಿ. ವಿ. ಆಂಜನಪ್ಪ.—ಈ ಮಿಲ್ಲಿನ ಬಂಡವಾಳವೆಷ್ಟು ಮತ್ತು ಅದರಲ್ಲಿ ಸರ್ಕಾರ ಹಾಕಿರುವ ಬಂಡವಾಳವೆಷ್ಟು ಮತ್ತು ಖಾಸಗಿಯವರದೆಷ್ಟು ?

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರದ ಷೇರು ಬಂಡವಾಳ 40 ಲಕ್ಷ ರೂಪಾಯಿ, 15 ಲಕ್ಷ ಡಿಬೆಂಚರ್ ಮೈಕ್ಕಿಗಳದ್ದು ಮತ್ತು ಸಹಕಾರ ಸಂಸ್ಥೆಗಳದ್ದು ಇದೆ.

Sri KESHAVA RAO NITTURKAR.—To avoid further loss, has Government fixed certain time limit within which to get rid of this Mill—lease out the mill or hand over to private party ?

Sri P. M. NADGOUDA.—Government has already taken action. The Mill has been closed on account of heavy losses and Government is now negotiating with 12 parties. They are being interviewed from yesterday and after that Government will take a decision.

ಶ್ರೀ ಜಿ. ವಿ. ಆಂಜನಪ್ಪ.—ಈ ಮಿಲ್ಲಿನಲ್ಲಿ ಹಾಕಿರುವ ಬಂಡವಾಳದಲ್ಲಿ ಸರ್ಕಾರದ ಪಾಲು ಹೆಚ್ಚಾಗಿದ್ದು ಕಾರ್ಖಾನೆಯ ಮೇಲ್ವಿಚಾರಣೆ ಸರ್ಕಾರದಲ್ಲಯೇ ಇತ್ತು. ಸರ್ಕಾರದ ಆಡಳಿತ ದಲ್ಲದ್ದಾಗ್ಯೂ ನುಮಾರು 50 ಲಕ್ಷ ಲುಕ್ಸಾನಾಗುವುದಕ್ಕೆ ಕಾರಣವೇನು ?

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರದ ಆಡಳಿತವಲ್ಲಿ ಇರಲಿಲ್ಲ. ಸಹಕಾರ ಸಂಸ್ಥೆ ಮ್ಯಾನೇಜ್‌ಮೆಂಟಿನಲ್ಲಿತ್ತು. ಸರ್ಕಾರದಿಂದ ಒಬ್ಬ ಮ್ಯಾನೇಜಿಂಗ್ ಡೈರೆಕ್ಟರನ್ನು ಕೊಟ್ಟಿತ್ತು.

ಶ್ರೀ ವೈ. ಎಸ್. ಪಾಟೀಲ್.—ಈಗ ತೆಗೆದುಹಾಕಿರುವ 1886 ಕಾರ್ಮಿಕರಿಗೆ ಮಾನವೀಯತೆಯ ದೃಷ್ಟಿಯಿಂದ ಬೇರೆಲ್ಲಿಯಾದರೂ ನೌಕರಿ ಒದಗಿಸಿಕೊಡುವಂಥ ಜವಾಬ್ದಾರಿಯನ್ನು ಸರ್ಕಾರ ಹೊತ್ತುಕೊಂಡು ವ್ಯವಸ್ಥೆಯನ್ನು ಮಾಡುವುದೇ ?

ಶ್ರೀ ಪಿ. ಎಂ. ನಾಡಗೌಡ.—ಇಂಡಸ್ಟ್ರಿಯಲ್ ಆಕ್ಟ್ ಪ್ರಕಾರ ಸರ್ಕಾರದ ಜವಾಬ್ದಾರಿ ಏನಿತ್ತು ಅದನ್ನೆಲ್ಲ ಪೂರ್ಣ ಮಾಡಿದ್ದೇವೆ. ಅವರಿಗೆ ಏನು ವೇಜಸ್ ಬರಬೇಕು, ಪ್ರಾವಿಡೆಂಟ್ ಫಂಡ್ ಬರಬೇಕು ಅದನ್ನೆಲ್ಲ ಕೊಟ್ಟು ಒಂದು ತಿಂಗಳ ವೇಜಸ್ ಕೊಟ್ಟಿದ್ದಾರೆ. ಇಂಡಸ್ಟ್ರಿಯಲ್ ಆಕ್ಟ್ ಪ್ರಕಾರ ಏನು ಸವಲತ್ತುಗಳಿವೆ ಅದನ್ನು ಕೊಡಲಕ್ಕೆ ಒದ್ದಾರಿದ್ದಾರೆ. ಬಾಕಿಯದು ನಮಗೆ ಬಾಧ್ಯತೆ ಇಲ್ಲ. ಆ ಕಾರ್ಖಾನೆಯನ್ನು ಯಾರಾದರೂ ತೆಗೆದುಕೊಂಡು ನಡೆಸಿದರೆ ಆ ವೇಳೆಗೆ ಮಾನವೀಯತೆಯ ದೃಷ್ಟಿಯಿಂದ ನೋಡಿ ಸಹಾಯ ಮಾಡಬಹುದು.

Representation for Diversion of Yagachi River

122. Sri CHANNAIAH WADEYAR (Local Authorities, Constituency).—

Will the Chief Minister be pleased to state :—

(*a*) whether the atchkatdars of V. V. Sagar, Hiriyur Taluk have presented a Memorandum to the Chief Minister on 18th July 1969 requesting to divert Yagachi river to V. V. Sagar ;

(*b*) whether plans and estimates have been prepared in that behalf;

(*c*) the estimated cost of the Project;

(*d*) the steps taken by the Government to implement the Scheme?

Sri D. PARAMESHWARAPPA (Deputy Minister for Major Irrigation and Electricity) [On behalf of SRI VEERENDRA PATIL) (Chief Minister)].—

(*a*) Yes.

(*b*) Yes.

(*c*) Rs. 147 lakhs.

(*d*) The Project has been sent to C.W. P.C. for technical clearance.

ಶ್ರೀ ಚನ್ನಯ್ಯ ಒಡೆಯರ್.—ಯಗಚಿ ನದಿ ನೀರಿನ್ನು ವಾಣಿವಿಲಾಸ ಸಾಗರಕ್ಕೆ ತಿರುಗಿಸುವ ವಿಚಾರದಲ್ಲಿ ಕ್ರಮ ಕೈಕೊಂಡಿರುವುದೇನು ?

ಶ್ರೀ ಡಿ. ಪರಮೇಶ್ವರಪ್ಪ.—ಸ್ಕೀಂ ಇನ್‌ವೆಸ್ಟಿಗೇಟ್ ಮಾಡಿ ಎಸ್ಟಿಮೇಟ್ ವಗೈರೆ ಮಾಡು ತ್ತಿದ್ದೇವೆ.

ಶ್ರೀ ಚನ್ನಯ್ಯ ಒಡೆಯರ್.—ಎಷ್ಟು ವರ್ಷದಿಂದ ಈ ಬಗ್ಗೆ ಮನವಿ ನಲ್ಲಿಸುತ್ತಿದ್ದಾರೆ ?

ಶ್ರೀ ಡಿ. ಪರಮೇಶ್ವರಪ್ಪ.—1963ರಿಂದ.

ಶ್ರೀ ಚನ್ನಯ ಒಡೆಯರ್.—ಇಲ್ಲಿಯವರೆಗೂ ಏಕೆ ಕ್ರಮ ಕೈಕೊಂಡಿಲ್ಲ ?

ಶ್ರೀ ಡಿ. ಪರಮೇಶ್ವರಪ್ಪ.—ಈ ಕೆಲಸವನ್ನು ತೆಗೆದುಕೊಳ್ಳಬೇಕೆಂದು ನಾಲ್ಕನೆ ಪಂಡವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆ. ಸಾಕಷ್ಟು ಹಣ ದೊರೆಯುದೆ ತೆಗೆದುಕೊಳ್ಳುವುದು ನಿಧಾನ ವಾಗಿದೆ.

ಶ್ರೀ ಚನ್ನಯ್ಯ ಒಡೆಯರ್.—ಹತ್ತು ವರ್ಷಗಳಿಂದ ಅಲ್ಲಿ ಅಚ್ಚುಕಟ್ಟುದಾರರಿಗೆ ಕೋಡಿ ಗಟ್ಟಲೆ ನಷ್ಟವಾಗಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ಪರಮೇಶ್ವರಪ್ಪ.—ಮಾನ್ಯ ಸದಸ್ಯರು ಎಗ್ಸಾಗರೇಟ್ ಮಾಡುತ್ತಿದ್ದಾರೆ. ಆದರೆ ಮಳೆ ಕಡಮೆಯಾದಾಗ ವಾಣಿವಿಲಾಸ ಸಾಗರ ತುಂಬದೆ ಟೈಲ್ ಎಂಡ್ ರ್ಯಾಂಡಿನವರಿಗೆ ತೊಂದರೆಯಾಗಿದೆ.

ಶ್ರೀ ಚನ್ನಯ್ಯ ಒಡೆಯರ್.—ಹಾಗಾದರೆ ಮನವಿ ಹತ್ತು ವರ್ಷಗಳಿಂದ ಬರುತ್ತಿದೆ, ಅವಶ್ಯಕತೆ ಇದೆ ಎಂಬುದನ್ನು ಒಪ್ಪಿದ್ದೀರಿ. ಏಕೆ ಮನಗಂಡಿದ್ದರೂ ಕಾರ್ಯಕ್ರಮ ತೆಗೆದು ಕೊಳ್ಳದ ಯೋಜನೆ ಮಂಜೂರು ಮಾಡದೆ ಇರುತ್ತೀರಿ ?

ಶ್ರೀ ಡಿ. ಪರಮೇಶ್ವರಪ್ಪ.—ನರಕಾರಕ್ಕೆ ಮನವಿ ಬಂದಕೂಡಲೆ ಸಾಧಕ ಬಾಧಕಗಳನ್ನು ತಿಳಿಯದೆ ಮಂಜೂರು ಮಾಡುವುದಕ್ಕಾಗುವುದಿಲ್ಲ. ಯಗಚಿ ನದಿಯ ನೀರನ್ನು ವಾಣಿವಿಲಾಸ ಸಾಗರಕ್ಕೆ ತಿರುಗಿಸಿದರೆ ಆದರಿಂದಾಗುವ ಪರಿಣಾಮವೇನು, ಸಾಧಕಬಾಧಕಗಳೇನು ಎಂದು ಪರಿಶೀಲಿಸಿ ಯಾವುದಾದರೂ ಒಂದು ಕ್ರಮ ಕೈಕೊಳ್ಳಬೇಕು. ಈಗ ಈ ವಿಚಾರ ಅಂತಿಮ ಮುಟ್ಟದಲ್ಲಿದೆ.